# ಸಚ್ಚಿದಾನಂದನೇ ಗುರು



ಎಲ್ಲರಿಗೂ ಮುಕ್ತಿ ದೊರೆಯುತ್ತದೆ. ಆದರೆ ಗುರುವಿನ ಉಪದೇಶಕ್ಕನುಸಾರ ನಡೆದುಕೊಳ್ಳಬೇಕು. ಅಡ್ಡಮಾರ್ಗ ಹಿಡಿದರೆ ದಾರಿಗೆ ಹಿಂದಿರುಗಿ ಬರಲು ಕಷ್ಟಪಡಬೇಕಾಗುತ್ತದೆ. ಮುಕ್ತಿ ದೊರೆಯಬೇಕಾದರೆ ಬಹಳ ಕಾಲ ಹಿಡಿಯುತ್ತದೆ. ಬಹುಶಃ ಈ ಜನ್ಮದಲ್ಲಿ ದೊರೆಯದೆ ಹೋಗಬಹುದು. ಮತ್ತೆ, ಬಹುಶಃ ಅನೇಕ ಜನ್ಮಗಳ ನಂತರ ದೊರೆತು ಬಿಡಬಹುದು.

❁ ಸಿಕ್ಕಿಸಿಕ್ಕಿದವರೆಲ್ಲಾ ಗುರು ಆಗಲಾರರು. ಮರದ ದಿಮ್ಮಿ ತಾನೂ ತೇಲಿಹೋಗಬಲ್ಲುದು, ಅನೇಕ ಜಂತುಗಳನ್ನೂ ಹೊತ್ತುಕೊಂಡು ಹೋಗಬಲ್ಲುದು. ಬೆಂಡಿನ ಮೇಲೆ ಹತ್ತಿ ಕುಳಿತರೆ, ಬೆಂಡೂ ಮುಳುಗಿ ಹೋಗುತ್ತದೆ, ಹತ್ತಿದವನೂ ಮುಳುಗಿ ಹೋಗುತ್ತಾನೆ. ಅದಕ್ಕಾಗಿಯೇ ಭಗವಂತನು ಯುಗಯುಗದಲ್ಲೂ ಗುರುರೂಪದಿಂದ ಅವತೀರ್ಣನಾಗುತ್ತಾನೆ. ಸಚ್ಚಿದಾನಂದನೇ ಗುರು.

❁ ಈ ಮೂರು ಮಾತುಗಳನ್ನು – ಗುರು, ಕರ್ತ, ತಂದೆ ಎಂಬುದನ್ನು ಎತ್ತಿದರೆ ನನಗೆ ಮುಳ್ಳು ಚುಚ್ಚಿದ ಹಾಗೆ ಆಗುತ್ತದೆ. ಇರತಕ್ಕ ಗುರು ಕೇವಲ ಒಬ್ಬನೇ ಒಬ್ಬ. ಆತನೆ ಸಚ್ಚಿದಾನಂದ. ಆತ ಮಾತ್ರವೇ ಶಿಕ್ಷಣ ಕೊಡಬಲ್ಲ. ನನ್ನದು ಸಂತಾನಭಾವ. ಮಾನವನ ಅಂತಸ್ತಿನಲ್ಲಿರುವ ಗುರುಗಳು ಲಕ್ಷಗಟ್ಟಲೆ ಸಿಗುತ್ತಾರೆ. ಎಲ್ಲರಿಗೂ ಗುರು ಆಗಬೇಕು ಅಂತ ಇಚ್ಛೆ. ಆದರೆ ಶಿಷ್ಯನಾಗಬೇಕು ಅಂತ ಯಾರಿಗೆ ತಾನೆ ಇಚ್ಛೆಯಿದೆ?

❁ ಕೇವಲ ಸಚ್ಚಿದಾನಂದನೇ ಗುರು. ಮನುಷ್ಯ ಗುರುವಿನ ಪಟ್ಟ ಧರಿಸಿ ಜನರಲ್ಲಿ ಆತ್ಮ ಜಾಗೃತಿಯನ್ನುಂಟುಮಾಡಿದ್ದೇ ಆದರೆ, ಆಗ ತಿಳಿದುಕೊಳ್ಳಬೇಕು, ಸಚ್ಚಿದಾನಂದನೇ ಆ ರೂಪ ಧರಿಸಿದ್ದಾನೆ ಎಂಬುದಾಗಿ. ಗುರು ಒಬ್ಬ ಸ್ನೇಹಿತ ಇದ್ದ ಹಾಗೆ. ಆತ ಕೈಹಿಡಿದು ಕರೆದುಕೊಂಡು ಹೋಗುತ್ತಾನೆ. ಭಗವಂತನ ದರ್ಶನವಾದ ನಂತರ ಗುರು–ಶಿಷ್ಯರ ಭೇದವಿರದು. ಅದು ಬಹಳ ತೊಡಕಿನ ಸನ್ನಿವೇಶವನ್ನು ಸೃಜಿಸುತ್ತದೆ. ಅಲ್ಲಿ ಗುರು–ಶಿಷ್ಯರು ಒಬ್ಬರನ್ನೊಬ್ಬರು ಗುರುತಿಸಲಾರರು. ಇದಕ್ಕಾಗಿಯೆ ಜನಕರಾಜ ಶುಕದೇವನಿಗೆ ಹೇಳಿದ: 'ನಿನಗೆ ಬ್ರಹ್ಮಜ್ಞಾನ ಬೇಕಾಗಿದ್ದರೆ ಮೊದಲು ಗುರುದಕ್ಷಿಣೆ ಕೊಡು.' ಏಕೆಂದರೆ ಬ್ರಹ್ಮಜ್ಞಾನ ದೊರೆತ ನಂತರ ಗುರು, ಶಿಷ್ಯರೆಂಬ ಭೇದ ಬುದ್ಧಿ ಇರದು. ಭಗವಂತನ ಸಾಕ್ಷಾತ್ಕಾರವಾಗದೆ ಇರುವವರೆಗೆ ಮಾತ್ರ ಗುರು–ಶಿಷ್ಯ ಸಂಬಂಧ.

❁ ಡಾಕ್ಟರುಗಳಲ್ಲಿ ಮೂರು ವಿಧ – ಉತ್ತಮ, ಮಧ್ಯಮ, ಅಧಮ. ಯಾವ ಡಾಕ್ಟರ್ ರೋಗಿಯ ನಾಡಿ ಹಿಡಿದು ನೋಡಿ, 'ಔಷಧ ಕುಡಿಯಪ್ಪ' ಅಂತ ಹೇಳಿ ಹೊರಟುಹೋಗುತ್ತಾನೋ, ಆತ ಅಧಮ ಡಾಕ್ಟರ್. ಮಧ್ಯಮ ಡಾಕ್ಟರ್, ವಿವಿಧ ರೀತಿಯಿಂದ ಔಷಧ ಕುಡಿಯುವಂತೆ ರೋಗಿಗೆ ತಿಳಿಸಿ ಆತನ ಮನಸ್ಸನ್ನು ಒಪ್ಪಿಸುತ್ತಾನೆ. ಆದರೆ ಯಾವ ಡಾಕ್ಟರ್ ಯಾವ ವಿಧದಿಂದಲೂ ರೋಗಿ ಔಷಧ ಸೇವಿಸದಿರುವುದನ್ನು ನೋಡಿ, ಆತನ ಎದೆಮೇಲೆ ಮಂಡಿಯೂರಿ ಬಲಾತ್ಕಾರದಿಂದ ಕುಡಿಸಿಬಿಡುತ್ತಾನೋ, ಆತನೇ ಉತ್ತಮ ಡಾಕ್ಟರ್. ಹಾಗೇ ಆಚಾರ್ಯರಲ್ಲೂ ಮೂರು ವಿಧ. ಅಧಮ ಆಚಾರ್ಯ ಶಿಷ್ಯರಿಗೆ ಉಪದೇಶವಿತ್ತು ಮತ್ತೆ ಅವರು ಬದುಕಿದ್ದಾರೆಯೇ ಸತ್ತರೇ ಎಂಬುದರ ಗೋಜಿಗೆ ಹೋಗುವುದಿಲ್ಲ. ಮಧ್ಯಮ ಆಚಾರ್ಯ ತನ್ನ ಶಿಷ್ಯರ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ತಾನು ಕೊಟ್ಟ ಉಪದೇಶ ಸರಿಯಾಗಿ ಬೇರೂರಲೆಂದು ಅದನ್ನು ಪದೇಪದೇ ಅವರಿಗೆ ತಿಳಿಸುತ್ತಾನೆ. ಬಹಳವಾಗಿ ಅನುನಯ ವಿನಯ ತೋರಿಸುತ್ತಾನೆ, ಪ್ರೀತಿ ತೋರಿಸುತ್ತಾನೆ. ಆದರೆ ಯಾರು ತನ್ನ ಶಿಷ್ಯರು ಯಾವ ವಿಧದಿಂದಲೂ ದಾರಿಗೆ ಬಾರದೆ ಇರುವುದನ್ನು ನೋಡಿ ಕೊನೆಗೆ ಬಲ ಪ್ರಯೋಗವನ್ನು ಮಾಡಿಯೇಬಿಡುತ್ತಾನೊ, ಆತ ಉತ್ತಮ ಆಚಾರ್ಯ.

❁ ಒಬ್ಬ ಇನ್ನೊಬ್ಬನನ್ನು ಸಂಸಾರಬಂಧನದಿಂದ ಮುಕ್ತನನ್ನಾಗಿ ಮಾಡಲು ಸಾಧ್ಯವೆ? ಈ ಭುವನಮೋಹಿನಿ ಮಾಯೆ ಯಾರದೋ ಆತನೇ ಅದರಿಂದ ಮನುಷ್ಯರನ್ನು ಮುಕ್ತರನ್ನಾಗಿ ಮಾಡಬಲ್ಲ. ಸಚ್ಚಿದಾನಂದ ಗುರುವೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಶರಣ್ಯರೇ ಇಲ್ಲ. ಯಾರು ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡಿಲ್ಲವೋ, ಯಾರಿಗೆ ಆತನಿಂದ ಆದೇಶ ದೊರೆತಿಲ್ಲವೋ, ಯಾರು ಭಗವಂತನ ಶಕ್ತಿಯಿಂದ ಶಕ್ತಿಯುತರಾಗಿಲ್ಲವೋ ಅವರ ಕೈಯಲ್ಲಿ ಜೀವರ ಭವಬಂಧನವನ್ನು ಬಿಡಿಸಲು ಎಂದಿಗಾದರೂ ಸಾಧ್ಯವಾಗುವುದೆ?

❁ ಜೀವ ಸಚ್ಚಿದಾನಂದನೇ ಅಲ್ಲದೆ ಇನ್ನು ಬೇರೆ ಏನೂ ಅಲ್ಲ. ಆದರೆ ಈ ಮಾಯೆ, ಎಂದರೆ ಅಹಂಕಾರ ಅನೇಕ ಉಪಾಧಿಗಳನ್ನು ಸೃಷ್ಟಿಸಿರುವುದರಿಂದ ಆತ ತನ್ನ ನಿಜಸ್ವರೂಪವನ್ನು ಮರೆತು ಬಿಟ್ಟಿದ್ದಾನೆ.

❁ ಚೌಧುರಿ: ಮಹಾಶಯರೆ, ಗುರುವಿಲ್ಲದೆ ಭಗವಂತನ ಸಾಕ್ಷಾತ್ಕಾರ ದೊರೆಯುವುದಿಲ್ಲವೆ?

ಶ್ರೀರಾಮಕೃಷ್ಣರು: ಸಚ್ಚಿದಾನಂದನೇ ಗುರು. ಶವಸಾಧನೆ ಮಾಡಿ, ಇನ್ನೇನು ಇಷ್ಟ ದರ್ಶನವಾಗುತ್ತದೆ ಎನ್ನುವಾಗ ಗುರು ಕಾಣಿಸಿಕೊಂಡು ಸಾಧಕನಿಗೆ ಹೇಳುತ್ತಾನೆ: 'ನೋಡಲ್ಲಿ! ನಿನ್ನಿಷ್ಟ ದೇವರನ್ನು ನೋಡಲ್ಲಿ.' ಬಳಿಕ ಗುರು ಇಷ್ಟದೇವನಲ್ಲಿ ಲೀನನಾಗಿ ಬಿಡುತ್ತಾನೆ. ಯಾರು ಗುರುವೋ ಆತನೇ ಇಷ್ಟದೇವ. ಗುರು ಭಗವಂತನಲ್ಲಿಗೆ ಕೊಂಡೊಯ್ಯುವ ದಾರ. ಹೆಂಗಸರು ಅನಂತನ ವ್ರತ ಆಚರಿಸುತ್ತಾರೆ. ಆದರೆ ಅವರು ಪೂಜೆ ಮಾಡುವುದು ವಿಷ್ಣುವನ್ನು. ಆತನ ಮೂಲಕವೇ ಭಗವಂತನ ಅನಂತತೆಯನ್ನು ಪೂಜೆ ಮಾಡುತ್ತಾರೆ.

**ಶ್ರೀರಾಮಕೃಷ್ಣ ವಚನವೇದ** ದಿಂದ

# ಆಧ್ಯಾತ್ಮಿಕ ಸಂಭಾಷಣೆ



## ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

**ಪ್ರಶ್ನೆ:** ಯಾರದು ಕೊನೆಯ ಜನ್ಮವೋ ಅವರು ಇಲ್ಲಿಗೆ ಬಂದೇ ತೀರಬೇಕು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಇದೊಂದು ಅಂಧಾಭಿಮಾನದ ಮಾತಾಗುವುದಿಲ್ಲವೆ?

**ಮಹಾರಾಜ್:** ಹೌದು, 'ಇಲ್ಲಿಗೆ' ಎನ್ನುವುದನ್ನು ಒಂದು ವೇಳೆ ಬರೀ ಅವರ ಮಾತು ಎಂದು ಭಾವಿಸಿದರೆ ಅದು ಅಂಧಾಭಿಮಾನ. ಅವರ ಆದರ್ಶದ ಬಗ್ಗೆ ಭಾವಿಸಿದರೆ, ಆಗ ಅದು ಹಾಗಾಗುವುದಿಲ್ಲ.

**ಪ್ರಶ್ನೆ:** ಇಲ್ಲಿ ಕೊನೆಯ ಜನ್ಮವೆಂದರೆ ಜನನ-ಮರಣಗಳಿಂದ ಮುಕ್ತಿ ಎಂದು ತಾನೆ ಅರ್ಥ?

**ಮಹಾರಾಜ್:** ಅಂದರೆ ಮುಂದೆ ಜನಿಸುವುದಿಲ್ಲ ಎಂದರ್ಥ.

**ಪ್ರಶ್ನೆ:** ಮುಕ್ತಿ ಎಂಬುದು ಪುಸ್ತಕದ ವಿಚಾರವಲ್ಲ, ಈ ಹಿಂದೆ ಕೂಡ ಬಹು ಜನರು ಮುಕ್ತರಾಗಿದ್ದಾರೆ ಎಂದು ನಾವು ನಂಬುತ್ತೇವೆ.

**ಮಹಾರಾಜ್:** ಹಿಂದಿನ ವಿಚಾರದ ಬಗ್ಗೆ ಅವರು ಹೇಳುತ್ತಿಲ್ಲ, ಇಲ್ಲಿಗೆ ಬರಬೇಕು ಎಂಬುದು ವರ್ತಮಾನದ ಮತ್ತು ಭವಿಷ್ಯತ್ತಿನ ವಿಚಾರ.

**ಪ್ರಶ್ನೆ:** ಅಂದರೆ ಅವರೊಂದು ಹೊಸ ಶರತ್ತನ್ನು ಹಾಕಿದರೆ?

**ಮಹಾರಾಜ್:** ಹೊಸ ಶರತ್ತಲ್ಲ, ಕೆಲವು ಹೊಸ ಆದರ್ಶಗಳು. ಅವತಾರ ಪುರುಷರು ಬಂದಾಗ ಹಳೆಯ ಆದರ್ಶಗಳನ್ನು ರಕ್ಷಣೆ ಮಾಡುವುದರೊಂದಿಗೆ, ಕೆಲವು ಹೊಸತನ್ನೂ ಸೇರಿಸಿ ಹೋಗುತ್ತಾರೆ.

**ಪ್ರಶ್ನೆ:** ಪೂರ್ವಕಾಲದಲ್ಲಿಯೂ ಮನುಷ್ಯರು ಮುಕ್ತಿ ಗಳಿಸಿದ್ದಾರೆ, ಈಗ ಮುಕ್ತಿಗಾಗಿ ಇನ್ನೊಂದು ಹೊಸ ಆದರ್ಶವನ್ನು ಏಕೆ ಸ್ವೀಕರಿಸಬೇಕು?

**ಮಹಾರಾಜ್:** ಹಿಂದೆ ಮುಕ್ತಿಗಾಗಿ ತೋರಿಸಿದ ಪಥ ಬಹು ಕಠಿಣವಾದದ್ದು. ಹೊಸ ಅವತಾರದಲ್ಲಿ ಆ ಪಥವನ್ನು ಸರಳ ಮಾಡಿಕೊಟ್ಟಿದ್ದಾರೆ.

**ಪ್ರಶ್ನೆ:** ಅಂದರೆ ಈಗಿನ ಮುಕ್ತಿಯ ದಾರಿ ಕಠಿಣವಲ್ಲ, ಸುಲಭವಾಗಿದೆ.

**ಮಹಾರಾಜ್:** ಹೌದು.

**ಪ್ರಶ್ನೆ:** ಇಲ್ಲಿಗೆ ಬರಲೇಬೇಕು ಎಂಬ ಮಾತು ತುಸು ಒತ್ತಾಯ ಬಲವಂತದ್ದಾಗುವುದಿಲ್ಲವೆ? ಇದೊಂದು condition ಆಗದೆ?

**ಮಹಾರಾಜ್:** ಬರಲೇಬೇಕು ಎಂದರೆ ಈ ಭಾವಧಾರೆಯವನ್ನು ಸ್ವೀಕರಿಸಬೇಕು ಎಂದು ಅರ್ಥ.

**ಪ್ರಶ್ನೆ:** ಈ ಭಾವಧಾರೆಯನ್ನು ಬಿಟ್ಟರೆ ಮುಕ್ತಿ ಸಿಗುವುದಿಲ್ಲವೆ?

**ಮಹಾರಾಜ್:** ಇದನ್ನು ಹೇಳುವುದು ಕಷ್ಟ.

**ಪ್ರಶ್ನೆ:** ಅವರ ಬಳಿಗೆ ಹೋಗುವುದು ಎಂದು ತಿಳಿದರೆ ಅದು ಅಂಧಾನುಕರಣೆ; ಅವರ ಆದರ್ಶದ ಭಾವವನ್ನು ಗ್ರಹಿಸಿದರೆ ಅದು ಅಂಧಾನುಕರಣೆ ಅಲ್ಲವೆಂದಿರಿ. ಅವರ ಬಳಿಗೆ ಹೋಗುವುದು ಮತ್ತು ಅವರ ಆದರ್ಶವನ್ನು ಸ್ವೀಕರಿಸುವುದು, ಇವೆರಡರ ಮಧ್ಯೆ ವ್ಯತ್ಯಾಸವೇನು?

**ಮಹಾರಾಜ್:** ಅವರು ಎಂದರೆ ಯಾರು?

**ಪ್ರಶ್ನೆ:** ಶ್ರೀರಾಮಕೃಷ್ಣರು.

**ಮಹಾರಾಜ್:** ಶ್ರೀರಾಮಕೃಷ್ಣರು – ಅವರ ದೇಹತ್ಯಾಗವಾಗಿ ಹೋಗಿದೆ. ಆದರೇನು? ಅವರು ಯಾವ ಆದರ್ಶವನ್ನು ಕೊಟ್ಟು ಹೋಗಿದ್ದಾರೋ, ಆ ಭಾವವನ್ನು ಸ್ವೀಕರಿಸಬೇಕು.

**ಪ್ರಶ್ನೆ:** ಸರಿ, ಆದರೆ 'ಅವರ' ಹತ್ತಿರ ಬರುವುದು ಎಂದರೆ ಅದು ಅಂಧಾಭಿಮಾನ ಎನ್ನಬಹುದಲ್ಲವೆ?

**ಮಹಾರಾಜ್:** ಅಂಧಾಭಿಮಾನ ಎಂದು ನಾವು ಹೇಳುತ್ತೇವಷ್ಟೆ, ಆದರೆ ಗೀತೆಯಲ್ಲಿ '**ಸ ಏವಾಽಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ**' *(೪.೩)* ಎಂದು ಹೇಳಿದೆ. ಈ ಸನಾತನಧರ್ಮ ಸದಾ ಇದೆ ಮತ್ತು ಇರುತ್ತದೆ. ಠಾಕೂರರೂ ಇದನ್ನೇ ಹೇಳಿದ್ದಾರೆ. ಅಂಧಾಭಿಮಾನವಾಗುತ್ತಿದ್ದರೆ ಅವರಿಗೆ ಈ ಮಾತನ್ನು ಹೇಳಲು ಆಗುತ್ತಿರಲಿಲ್ಲ.

**ಪ್ರಶ್ನೆ:** ಹಾಗಾದರೆ, ಸ್ವಯಂ ಭಗವಂತನೇ ಈ ಯುಗದಲ್ಲಿ ಅವನ ಭಾವ ಮತ್ತು ಆದರ್ಶಗಳನ್ನು ಹೇಳಿದ್ದಾನೆ. ಇದು ಹೇಗೆ ಹೊಸತು?

**ಮಹಾರಾಜ್:** ಅಂದರೆ, ಇಲ್ಲಿ ಹೊಸ ಜೀವಂತಿಕೆ ಸಂಚಾರವಾಗಿದೆ.

**ಪ್ರಶ್ನೆ:** ಆದರ್ಶವೆಂದಾಗ ಹೊಸತೇನಾದರೂ ಇರುವುದಿಲ್ಲವೆ?

**ಮಹಾರಾಜ್:** ಹೌದು, ಆ ಆದರ್ಶದಲ್ಲಿ ಹೊಸತನವೂ ಉಂಟು.

**ಪ್ರಶ್ನೆ:** ಅದು ಯಾವುದು ಮಹಾರಾಜ್? ಶ್ರೀರಾಮಕೃಷ್ಣರ ಜೀವನ ಮತ್ತು ಆದರ್ಶದಲ್ಲಿ ಮತ್ತೆ ಹೊಸತನವೇನಿದೆ? ಇದರ ಬಗ್ಗೆ ಸ್ವಲ್ಪ ಹೇಳಿ.

**ಮಹಾರಾಜ್:** ಹೊಸತನವೆಂದರೆ ಯಜ್ಞಯಾಗಾದಿಗಳನ್ನು ಇನ್ನು ಮಾಡಬೇಕಾಗಿಲ್ಲ. ಭಗವನ್ನಾಮ ಸ್ಮರಣೆ ಮಾಡಿದರೆ ಸಾಕು. ಇದೇ ಹೊಸ ಆದರ್ಶ. ಯಜ್ಞ-ಯಾಗಾದಿಗಳನ್ನು ಮಾಡಬೇಕಾಗಿಲ್ಲ ಎಂದು ಬೇರೆ ಯಾರು ಹೇಳಿದ್ದಾರೆ? ಶ್ರೀರಾಮಕೃಷ್ಣರೇ ಹೇಳಿದರು.

**ಪ್ರಶ್ನೆ:** ಚೈತನ್ಯ ದೇವ ಕೂಡ ನಾಮಸ್ಮರಣೆ ಮಾಡಬೇಕೆಂದು ಹೇಳಿದ.

**ಮಹಾರಾಜ್:** ಚೈತನ್ಯದೇವ ಹೇಳಿದ್ದೇನೋ ಸರಿ, ಒಪ್ಪತಕ್ಕದ್ದೆ. ಆದರೆ ಅವನ ಆದರ್ಶ ಯಾವ ಸ್ಥಿತಿಯಲ್ಲಿದೆ ಎಂದು ನಾವು ಈಗ ನೋಡುತ್ತಿದ್ದೇವೆ. ಆದರ್ಶ ಯಾವಾಗ ಕಳೆಗುಂದುವುದೋ, ಅದನ್ನು ಪುನರುಜ್ಜೀವನಗೊಳಿಸಲು ಅವತಾರಗಳ ಆವಿರ್ಭಾವವಾಗುತ್ತದೆ ಆದ್ದರಿಂದ ಅವತಾರಗಳ ಆದರ್ಶ ಒಂದೆಡೆ ಸನಾತನ, ಇನ್ನೊಂದೆಡೆ ಅಷ್ಟೇ ನವೀನ.

**ಪ್ರಶ್ನೆ:** ಕಲಿಯುಗದಲ್ಲಿ ಕರ್ಮ ಮಾಡುವುದು ಬಹಳ ಕಠಿಣವೆಂದು ಠಾಕೂರ್ ಅದಕ್ಕಾಗಿಯೇ ಹೇಳಿದ್ದರು. ಕರ್ಮವೆಂದರೆ ವೈದಿಕ ಕರ್ಮ, ಅಂದರೆ ಯಾಗ ಯಜ್ಞಾದಿಗಳೆ?

**ಮಹಾರಾಜ್:** ಹೌದು.

**ಪ್ರಶ್ನೆ:** ಅಂದರೆ ಪುನಃ ಕರ್ಮಯೋಗದ ಉದಯವಾಯಿತು.

**ಮಹಾರಾಜ್:** ಕರ್ಮ ಎಂದು ಹೇಳುವಾಗ ಅವರು ಅದನ್ನು ಯಾವ ದೃಷ್ಟಿ ಕೋನದಿಂದ ಹೇಳಲಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ತಿನ್ನುವುದು, ಉಡುವುದು ಇತ್ಯಾದಿಗಳನ್ನು ಅವರು ನಿಷೇಧ ಮಾಡಿದ್ದಾರೆಯೆ? ಅವೂ ಕರ್ಮವಲ್ಲವೆ?

**ಪ್ರಶ್ನೆ:** ಅವರು ವೈದಿಕ ಕ್ರಿಯೆಗಳಿಂದ ಸಾಧಕನನ್ನು ಮುಕ್ತಗೊಳಿಸಿದರು, ಅದನ್ನು ಸಹಜವಾಗಿಸಿದರು.

**ಮಹಾರಾಜ್:** ಯಾಗಯಜ್ಞಾದಿಗಳಿಂದ ಮುಕ್ತಿ ಸಿಗದು. ಯಾರಿಗೆ 'ಮೊಲದ ಕೊಂಬಿ'ನಲ್ಲಿ ಹಾಗೂ ಸ್ವರ್ಗಕ್ಕೆ ಹೋಗಲು ಆಸೆಯಿದೆಯೊ ಅವರು ಅದನ್ನು ಮಾಡಲಿ. ಸಂನ್ಯಾಸಿಗಳು ಯಾಗ, ಯಜ್ಞಗಳನ್ನು

ತ್ಯಾಗ ಮಾಡಿದರು. ಯಾಗ ಯಜ್ಞಾದಿಗಳು ಅಷ್ಟೊಂದು ಆವಶ್ಯಕ ವಾಗಿದ್ದರೆ, ಅದನ್ನು ಬಿಟ್ಟುಬಿಡಲು ಹೇಳುತ್ತಿರಲಿಲ್ಲ.

**ಪ್ರಶ್ನೆ:** ಯಾಗ ಯಜ್ಞಾದಿಗಳನ್ನು ಗೃಹಸ್ಥರೂ ಬಿಟ್ಟುಬಿಟ್ಟಿದ್ದಾರೆ. ಅಥವಾ ವಿರಕ್ತಿ ಹೊಂದಿ ತ್ಯಾಗ ಮಾಡಿದ್ದಾರೆ!

**ಮಹಾರಾಜ್:** ಇಲ್ಲಿ ವಿರಕ್ತಿಯೆಂದರೆ ಮುಖ ಸೊಟ್ಟಗೆ ಮಾಡಿ ತ್ಯಜಿಸುವುದಲ್ಲ, ವಿರಕ್ತಿ ಎಂದರೆ ಆಸೆಯಿಲ್ಲದಿರುವುದು.

**ಪ್ರಶ್ನೆ:** ಏನೇ ಆಗಲಿ, ನಾವೀಗ ನೋಡುವ ಹಾಗೆ, ಮುಕ್ತಿ ಬೇಕಾದವರು ಶ್ರೀರಾಮಕೃಷ್ಣರ ಈ ನವೀನ ಆದರ್ಶಗಳನ್ನು ಸ್ವೀಕರಿಸಬೇಕಾಗುತ್ತದೆ. ಆದರೆ, ಒಂದು ಪ್ರಶ್ನೆ ಹಾಗೇ ಉಳಿಯಿತು: ಕೆಲವು ಪ್ರಾಚೀನ ಮಾರ್ಗಗಳನ್ನು ಅನುಸರಿಸಿದರೆ ಮುಕ್ತಿ ಸಿಗುವುದಿಲ್ಲವೆ?

**ಮಹಾರಾಜ್:** ಠಾಕೂರ್ ಪ್ರಾಚೀನ ಮಾರ್ಗಗಳನ್ನು ನಿಷೇಧಿಸಿದರೆ?

**ಪ್ರಶ್ನೆ:** ಇಲ್ಲ, ಹಾಗೆ ಹೇಳಿಲ್ಲ. ಆದರೆ ಇಲ್ಲಿಗೆ ಬರಲೇಬೇಕು ಎಂದು ಒತ್ತು ನೀಡಿ ಹೇಳಿದ್ದಾರಲ್ಲವೆ?

**ಮಹಾರಾಜ್:** ಈ ಎಲ್ಲ ಪಥಗಳೂ ಆ ಒಬ್ಬ ಭಗವಂತನೆಡೆಗೆ ಕರೆದುಕೊಂಡು ಹೋಗುವ ಮಾರ್ಗ. ಇದೇ ಶ್ರೀರಾಮಕೃಷ್ಣರ ವೈಶಿಷ್ಟ್ಯ.

**ಪ್ರಶ್ನೆ:** ಈ ಉದಾರ ಭಾವನೆಯನ್ನು ಸ್ವೀಕರಿಸಬೇಕು. ಅಲ್ಲವೆ?

**ಮಹಾರಾಜ್:** ಹೌದು.

**ಪ್ರಶ್ನೆ:** ಇದರರ್ಥ, 'ಇಲ್ಲಿ' ಎಂದರೆ ಒಂದು ಈ ಮಾರ್ಗವೆಂದೇ ಅರ್ಥ ಮಾಡಿಕೊಳ್ಳಬೇಕು.

**ಮಹಾರಾಜ್:** ಅದನ್ನೇ ಠಾಕೂರ್ ಬಾರಿಬಾರಿಗೂ ಹೇಳಿದರು. ಅವರದು ಸಮನ್ವಯಭಾವ. ಒಂದು ಭಾವವನ್ನು ದೃಢವಾಗಿ ಹಿಡಿದುಕೊ. ಹಾಗೆಂದು ಉಳಿದ ಆದರ್ಶಗಳನ್ನು ತಿರಸ್ಕಾರದಿಂದ ನೋಡಬಾರದು. ಶ್ರದ್ಧಾಸಂಪನ್ನನಾಗಿರಬೇಕು, ಯಾರೊಂದಿಗೂ ವಾದವಿವಾದ ಮಾಡಬೇಡ. ಕಾರಣ, ನಿನಗೆ ಅವರ ಮತ, ಧರ್ಮಗಳ ಬಗ್ಗೆ ಏನೂ ತಿಳಿಯದು. ನೀನು ನಂಬಿದ ಮಾರ್ಗದಲ್ಲೇ ಧೃಢವಾದ ನಿಷ್ಠೆಯನ್ನಿಟ್ಟುಕೊಂಡಿರು; ಅದರೊಂದಿಗೇ ಉಳಿದ ಮತ, ಧರ್ಮಗಳ ಬಗ್ಗೆ ಶ್ರದ್ಧಾಸಂಪನ್ನನಾಗಿರು. ಇದೇ ಶ್ರೀರಾಮಕೃಷ್ಣರ ಅಭಿಪ್ರಾಯ.

**ಪ್ರಶ್ನೆ:** ಮಹಾರಾಜ್, ತೋತಾಪುರಿ ದಕ್ಷಿಣೇಶ್ವರಕ್ಕೆ ಬರುವ ಮೊದಲೇ ಅದ್ವೈತ ದರ್ಶನದಲ್ಲಿ ಪ್ರತಿಷ್ಠಿತನಾಗಿದ್ದನೆಂದು ಕೇಳಿದ್ದೇವೆ. ಒಂದು ದಿನ ಅವನು ಶ್ರೀರಾಮಕೃಷ್ಣರ ಜೊತೆ ಧಾರ್ಮಿಕ ಚರ್ಚೆ ನಡೆಸುತ್ತಿದ್ದ. ರಾತ್ರಿಯಾಗಿದ್ದುದರಿಂದ ಧುನಿ ಉರಿಯುತ್ತಿತ್ತು. ಆಗ ಅಲ್ಲಿಗೆ ಒಬ್ಬ ಬಂದು, ತಂಬಾಕು ಹೊತ್ತಿಸಲು ಆ ಧುನಿಯಿಂದ ಒಂದು ಕೆಂಡವನ್ನು ತೆಗೆದುಕೊಂಡ. ಅದನ್ನು ನೋಡಿದ ತೋತಾಪುರಿ, ಆತನಿಗೆ ಚಿಮುಟಿಯಿಂದ ಹೊಡೆಯಲು ಹೋದ. ಇದನ್ನು ನೋಡಿದ ಶ್ರೀರಾಮಕೃಷ್ಣರು ನಗುತ್ತ, 'ಇದು ನಿನ್ನ ಬ್ರಹ್ಮಜ್ಞಾನದ ಗದ್ದಲವೆ?' ಎಂದರು. ಇಲ್ಲಿ ಅವರು ಏನು ಹೇಳಹೊರಟರು ಮಹಾರಾಜ್?

**ಮಹಾರಾಜ್:** ಶ್ರೀರಾಮಕೃಷ್ಣರು ಹೇಳುತ್ತಾರೆ, ಬ್ರಹ್ಮಜ್ಞಾನ ಹೊಂದಿದ ವ್ಯಕ್ತಿಯ ವ್ಯವಹಾರವೂ ಅದಕ್ಕೆ ಅನುರೂಪವಾಗಿ ಇರುತ್ತದೆ. ಎಲ್ಲೆಡೆ ಬ್ರಹ್ಮನನ್ನು ನೋಡುವವನು ಬ್ರಹ್ಮನನ್ನು ಹೊಡೆಯಲು ಮುನ್ನುಗ್ಗುತ್ತಾನೆಯೆ? ಬ್ರಹ್ಮಜ್ಞಾನಿಯ ನಡೆನುಡಿ ಒಂದೇ ರೀತಿ ಇರುವುದಿಲ್ಲ ಎಂದು ಸ್ಥಿರವಾಗುತ್ತದೆ. ಒಬ್ಬನಿಗೆ ಮುಂಗೋಪವಿದ್ದರೆ ಅದು ಹೋಗುವುದಿಲ್ಲ. ಮೊದಲು ಇತ್ತು, ನಂತರವೂ ಹಾಗೇ ಉಳಿಯುತ್ತದೆ. ಅದಕ್ಕೆ ಕಾರಣವಿಷ್ಟೆ, ಬ್ರಹ್ಮಜ್ಞಾನವಾದದ್ದು ನಿಜ, ಆದರೆ ಆತನ ಸಂಸ್ಕಾರಕ್ಕನುಗುಣವಾಗಿ ಆತನ ವ್ಯವಹಾರ ಪುನರಾವೃತ್ತಿ ಹೊಂದುತ್ತದೆ.

**ಪ್ರಶ್ನೆ:** ಬ್ರಹ್ಮಜ್ಞಾನವಾದ ಮೇಲೂ ಹೀಗೆ ಕ್ರೋಧವೃತ್ತಿ ಬರಬಹುದೆ?

**ಮಹಾರಾಜ್:** ಸಾಧ್ಯ, ಆದರೆ ಅದು ನಿಂದ್ಯವಾದದ್ದು. ನಮ್ಮ ಋಷಿಗಳೇನು ಕಡಿಮೆ ಕೋಪಿಷ್ಠರೆ? ಮಾತುಮಾತಿಗೂ ಹಿಡಿ ಶಾಪ ಹಾಕುತ್ತಿದ್ದರು. ಶಪಿಸಿದವನಿಗೆ ವಿಶಾಪವನ್ನೂ ಕೊಡುತ್ತಿದ್ದರು. ನಾಗರ ಹಾವಿನಂತೆ. ಕಡಿದರೆ ಪ್ರತಿಯಾಗಿ ಕಡಿಯಲು ಸೆಟೆದು ನಿಲ್ಲುತ್ತಿದ್ದರು.

**ಪ್ರಶ್ನೆ:** ಅಂದರೆ ತೋತಾಪುರಿಯ ಜ್ಞಾನ ಅಪೂರ್ಣವಾಗಿತ್ತೆ?

**ಮಹಾರಾಜ್:** ಅಪೂರ್ಣತೆಯೆಂದರೆ ಅದು ಜ್ಞಾನದ ಅಪೂರ್ಣತೆ ಅಲ್ಲ. ಆದರೆ ಆತ ಏನು ವ್ಯವಹಾರ ಮಾಡುತ್ತಾನೋ, ಅದರಲ್ಲಿ ಮಿಥ್ಯಾತ್ವದ ಬೋಧೆ ಉಳಿದುಬಿಡುತ್ತದೆ.

**ಪ್ರಶ್ನೆ:** ವ್ಯವಹಾರದಲ್ಲಿ ಮಿಥ್ಯಾತ್ವದ ಬೋಧೆ ಇರುತ್ತಿದ್ದರೆ ಹೀಗೇಕೆ ವ್ಯವಹರಿಸಿದ? ಮಿಥ್ಯೆಯ ಬೋಧೆ ಇರುತ್ತಿದ್ದರೆ ಕೋಪಿಸಿಕೊಳ್ಳುತ್ತಿದ್ದನೆ?

**ಮಹಾರಾಜ್:** ಅದು ಕ್ರೋಧವಲ್ಲ, ಕ್ರೋಧಾಭಾಸ.

**ಪ್ರಶ್ನೆ:** ಕ್ರೋಧಭಾಸವೆ? ಚಿಮುಟಿ ಹಿಡಿದುಕೊಂಡು ಹೊಡೆಯಲು ಹೋಗುವುದು ಕ್ರೋಧಾಭಾಸವೆ?

**ಮಹಾರಾಜ್:** ಹೊಡೆಯಬಾರದೆ?

**ಪ್ರಶ್ನೆ:** ಶರತ್ ಮಹಾರಾಜರು ಬರೆದಿದ್ದಾರೆ, ಠಾಕೂರರ ಗುರುದೇವ ಕೂಡ ಅಪೂರ್ಣನಾಗಿದ್ದ. ಠಾಕೂರರ ಸಂಸ್ಪರ್ಶದಿಂದ ಅವನು (ತೋತಾಪುರಿ) ಪೂರ್ಣತೆಯನ್ನು ಪಡೆದ. ಇದು ಹೇಗೆ?

**ಮಹಾರಾಜ್:** ಅಪೂರ್ಣತೆ ಎಂದರೆ ತೋತಾಪುರಿ ಶಕ್ತಿ (ದೇವಿ)ಯನ್ನು ಸ್ವೀಕರಿಸಿರಲಿಲ್ಲ. ಪರಮಹಂಸರ ಸಂಪರ್ಕದಿಂದಾಗಿ ಸ್ವೀಕರಿಸಿದ.

**ಪ್ರಶ್ನೆ:** ಅಲ್ಲೊಂದು ಅಲೌಕಿಕ ಘಟನೆ ನಡೆದಿತ್ತು.

**ಮಹಾರಾಜ್:** ಅಲೌಕಿಕ ಘಟನೆಯಲ್ಲ. ಅಲೌಕಿಕ ಘಟನೆಯೆಂದರೆ ಮಿಥ್ಯೆಯಲ್ಲ.

**ಪ್ರಶ್ನೆ:** ಗಂಗೆಯಲ್ಲಿ ನೀರಿಲ್ಲದ ಕಾರಣ ತೋತಾಪುರಿಗೆ ಮುಳುಗಿ ಸಾಯಲೂ ಸಾಧ್ಯವಾಗಲಿಲ್ಲ. ಇದರಲ್ಲಿ ಆತನ ಅವಿದ್ಯೆಯನ್ನು ಕಾಣಬೇಕೋ, ಅಥವಾ ಮಾಯೆಯನ್ನು ಕಾಣಬೇಕೋ, ಇದು ಸರಿಯಾಗಿ ಅರ್ಥವಾಗುತ್ತಿಲ್ಲ, ಮಹಾರಾಜ್.

**ಮಹಾರಾಜ್:** ಮುಳುಗಿ ಸಾಯಲಾಗಲಿಲ್ಲ ಎಂದಿಲ್ಲಿ ತಿಳಿದು ಬರುವುದಲ್ಲ, ಮಾಯೆಯ ಪ್ರಭಾವವೇ ಇಲ್ಲಿ ತಿಳಿದು ಬರುವುದು.

**ಪ್ರಶ್ನೆ:** ಲೌಕಿಕವೂ, ಅಲೌಕಿಕವೂ ಎಲ್ಲವೂ ಮಾಯೆಯ ಪ್ರಭಾವವೇ.

**ಮಹಾರಾಜ್:** ಲೌಕಿಕ, ಅಲೌಕಿಕ ಎಂದು ನಮ್ಮ ಬುದ್ಧಿಗೆ ಹೊಳೆದಂತೆ ನಾವು ಪ್ರತ್ಯೇಕಿಸುತ್ತೇವೆ. ಯಾವುದನ್ನು ನಮ್ಮ ಬುದ್ಧಿಯಿಂದ ಅರಿಯಲಾಗುವುದಿಲ್ಲವೋ ಅದನ್ನು ಅಲೌಕಿಕ ಎನ್ನುತ್ತೇವೆ. ಇದು ಆ ವಿಚಾರವಲ್ಲ. ಇಲ್ಲಿ ಇದರಿಂದ ತೋತಾಪುರಿಗೆ ಏನು ಲಾಭವುಂಟಾಯಿತು? ಆತನಿಗೆ ಮಾಯೆಯ ಪ್ರಭಾವ ಏನು ಮತ್ತು ಮಾಯೆಯ ಅಸ್ತಿತ್ವ ಏನು ಎಂಬುದು ಅರ್ಥವಾಯಿತು, ಅಷ್ಟೆ.

**ಪ್ರಶ್ನೆ:** ಆತನಿಗೆ ದರ್ಶನವುಂಟಾಗಿತ್ತೆಂದು ಹೇಳುತ್ತಾರೆ.

**ಮಹಾರಾಜ್:** ದರ್ಶನವೆಂದರೆ ಎರಡು ಕಣ್ಣುಗಳಿಂದ ನೋಡುವುದೆ?

**ಪ್ರಶ್ನೆ:** ದರ್ಶನವಾದ ಮೇಲೆ ಆತ ಸರ್ವತ್ರ ಜಗನ್ಮಾತೆಯ ದರ್ಶನ ಪಡೆದನೆಂದು ಹೇಳುತ್ತಾರೆ.